ಚಿತ್ರ: ಬಿ.ಕೆ. ಜನಾರ್ದನ್

ಅಕಿನೊರಿ-ನೊರಿಕಾ ದಂಪತಿ ಮಗಳು ಕರಿನ್ ಜತೆ

'ಗಾಲ್ಫ್ ಆಡಲು ಇಷ್ಟ'

ಜಪಾನ್ ದೇಶ ಪುಟ್ಟದ್ದಾದರೂ ಬಹಳ ಸುಂದರವಾಗಿದೆ. ಪೂರ್ವ ಏಷ್ಯಾದಲ್ಲಿರುವ ಈ ದೇಶಕ್ಕೆ 'ಉದಯ ರವಿಯ ನಾಡು' (ದಿ ಲ್ಯಾಂಡ್ ಆಫ್ ರೈಸಿಂಗ್ ಸನ್) ಎಂಬ ಹೆಸರಿದೆ. ಸಮುದ್ರದಿಂದ ಸುತ್ತುವರಿದ ಜಪಾನ್, ತಂತ್ರಜ್ಞಾನ ಮತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಮುಂದಿದೆ. ಈ ದೇಶದಿಂದಲೂ ಹಲವು ಮಂದಿ ಉದ್ಯೋಗಕ್ಕಾಗಿ ಬೆಂಗಳೂರಿಗೆ ಬಂದವರಿದ್ದಾರೆ. ಹಾಗೆ ಬಂದವರಲ್ಲಿ ಅಕಿನೊರಿ ಮತ್ತು ನೊರಿಕಾ ದಂಪತಿಗಳೂ ಒಬ್ಬರು.

ಅಕಿನೊರಿ ಉರಕಾವ ಮತ್ತು ನೊರಿಕೊ ಜಪಾನ್‌ನಿಂದ ಬೆಂಗಳೂರಿಗೆ ಎರಡು ವರ್ಷ ಹಿಂದೆ ಬಂದವರು. ಇಲ್ಲಿಗೆ ಬರುವುದಕ್ಕೆ ಮುನ್ನ ಬೆಂಗಳೂರು ನಗರ ಇಷ್ಟೊಂದು ಸುಂದರವಾಗಿದೆ, ಇಲ್ಲಿನ ವಾತಾವರಣ ಇಷ್ಟು ಹಿತಕರವಾಗಿದೆ ಎಂಬುದನ್ನು ಇವರಿಬ್ಬರು ಊಹಿಸಲೂ ಇಲ್ಲವಂತೆ. ಅಷ್ಟೊಂದು ಒಳ್ಳೆಯ ಅನುಭವ ಇಲ್ಲಿ ಆಗುತ್ತಿದೆ ಎಂದು ಸಂತೋಷ ವ್ಯಕ್ತಪಡಿಸುತ್ತಾರೆ ಈ ದಂಪತಿ.

ಅಕಿನೊರಿ ಖಾಸಗಿ ಕಂಪೆನಿಯೊಂದರಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ). ಪತ್ನಿ ನೊರಿಕಾ ಅವರೂ ಪತಿಯೊಂದಿಗೆ ಕೆಲಸದಲ್ಲಿ ಸಹಕರಿಸುತ್ತಾರೆ.

'ನಾವು 1988ರಲ್ಲಿ ಭಾರತಕ್ಕೆ ಪ್ರವಾಸಕ್ಕಾಗಿ ಅದಕ್ಕಿಂತ ಹೆಚ್ಚಾಗಿ ಹನಿಮೂನ್‌ಗೆಂದು ಬಂದಿದ್ದೆವು. ಆಗ ಭಾರತದ ಉತ್ತರ ಭಾಗಗಳಾದ ದೆಹಲಿ, ಕೋಲ್ಕತ್ತ, ಉತ್ತರ ಪ್ರದೇಶ, ವಾರಣಾಸಿ ಮುಂತಾದ ಜಾಗಗಳನ್ನು ಸಂದರ್ಶಿಸಿದ್ದೆವು. ಇನ್ನು ಕೆಲವು ಸಲ ನಾನು ನನ್ನ ವೃತ್ತಿ ನಿಮಿತ್ತ ಭಾರತಕ್ಕೆ ಬಂದಿದ್ದೆ. ಹೀಗೆ ಭಾರತ ದೇಶ ನಮಗೆ ಹೊಸದಲ್ಲ. ಆದರೆ ಬೆಂಗಳೂರು ನೋಡಿದ್ದು ಎರಡು ವರ್ಷ ಹಿಂದೆ, ಉದ್ಯೋಗ ನಿಮಿತ್ತ ಇಲ್ಲಿಗೆ ಬಂದಾಗಲೇ..' ಎನ್ನುತ್ತಾರೆ ಅಕಿನೊರಿ.

ಜಪಾನ್ ಚಿಕ್ಕ ದೇಶ. ಆದರೆ ಬೆಂಗಳೂರು ಒಂದು ಮೆಗಾ ಸಿಟಿ. ಜನಸಂಖ್ಯೆ ಹೆಚ್ಚು. ಸಂಸ್ಕೃತಿಯೂ ಶ್ರೀಮಂತವಾಗಿದೆ ಎನ್ನುವುದು ನನ್ನ ಅನಿಸಿಕೆ ಎನ್ನುವ ಅಕಿನೊರಿ, ಇಲ್ಲಿ ಕೆಲಸದ ವಾತಾವರಣ ಜಪಾನ್‌ಗಿಂತ ಭಿನ್ನ. ಜತೆಗೆ ಸಹೋದ್ಯೋಗಿಗಳು ಬೇಗನೆ ಬೆರೆಯುತ್ತಾರೆ. ತಮ್ಮ ಅನುಭವ, ಅನಿಸಿಕೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಾರೆ. ತಮ್ಮ ವೈಯಕ್ತಿಕ ಬದುಕಿನ ಬಗ್ಗೆಯೂ ಹೇಳಿಕೊಳ್ಳುತ್ತಾರೆ. ಕಚೇರಿಯಲ್ಲಿ ನಾವು ಕೆಲಸದ ವಿಷಯ ಮಾತ್ರವಲ್ಲದೆ ಕ್ರಿಕೆಟ್, ಪಾರ್ಟಿಗಳ ಬಗ್ಗೆಯೂ ಚರ್ಚೆ ನಡೆಸುತ್ತೇವೆ' ಎನ್ನುತ್ತಾರೆ ಅವರು.

ಸಾರಿಗೆ ವ್ಯವಸ್ಥೆ ಇಲ್ಲಿಗಿಂತ ಟೋಕಿಯೊದಲ್ಲಿ ಚೆನ್ನಾಗಿದೆ. ಮೆಟ್ರೊ ರೈಲಿನ ವ್ಯವಸ್ಥೆ ತುಂಬ ಅನುಕೂಲವಾಗಿದೆ. ಇಲ್ಲಿ ಜನದಟ್ಟಣೆ ಹೆಚ್ಚು, ನಾವು ಟ್ಯಾಕ್ಸಿ, ಆಟೊಗಳನ್ನೇ ಅವಲಂಬಿಸಬೇಕು. ಇಲ್ಲಿನ ಟ್ರಾಫಿಕ್ ಅಂತೂ ಬಹಳ ಕಿರಿಕಿರಿ. ಕಾರು ಚಾಲನೆ ಮಾಡಲು ಬಹಳ ತಾಳ್ಮೆ ಬೇಕು. ರಸ್ತೆಯಲ್ಲಿ ಒಂದು ವಾಹನಕ್ಕೂ ಇನ್ನೊಂದು ವಾಹನಕ್ಕೂ ಮಧ್ಯೆ ಅಂತರ ಬಹಳ ಕಡಿಮೆ. ಗಾಡಿ ಓಡಿಸುವವರೂ ಹೇಗೇಗೋ ನುಗ್ಗಿ ಓಡಿಸುವುದರಿಂದ ಅಪಘಾತಗಳೂ ಹೆಚ್ಚುತ್ತಿವೆ. ಆದರೆ ಜಪಾನ್‌ನಲ್ಲಿ ಅಪಘಾತಗಳ ಸಂಖ್ಯೆ ಕಡಿಮೆ, ಟ್ರಾಫಿಕ್ ಜಾಮ್ ಸಮಸ್ಯೆ ಇಲ್ಲವೇ ಇಲ್ಲ' ಎಂದು ತಮ್ಮ ದೇಶದ ಜತೆಗೆ ಬೆಂಗಳೂರನ್ನು ತುಲನೆ ಮಾಡುತ್ತಾರೆ ಅಕಿನೊರಿ.

ಸಂಕೋಚ ಸ್ವಭಾವದವರು

ಜಪಾನ್‌ನ ಬಹಳಷ್ಟು ಜನರು ಸಂಕೋಚ ಸ್ವಭಾವದವರು. ಇತರರಿಗೆ ಸಹಾಯ ಮಾಡುವ ಗುಣ ಕಡಿಮೆ. ಇಲ್ಲಿನವರು ಸ್ನೇಹಪರರು. ಬೇರೆಯವರನ್ನು ಪ್ರೀತಿಸುತ್ತಾರೆ. ಆದರೂ ಇವರಿಗೆ ಸ್ವಲ್ಪ ಅಹಂ ಇದೆ ಅನಿಸುತ್ತದೆ ಎಂದವರು ನಗುತ್ತಾರೆ.

'ಇಲ್ಲಿನ ಊಟ ತಿಂಡಿ ಬಹಳ ರುಚಿಕರವಾಗಿರುತ್ತದೆ. ಮಸಾಲೆಯುಕ್ತ ಪದಾರ್ಥ ಬಹಳ ಇಷ್ಟವಾಗುತ್ತದೆ. ಬೇರೆ ಬೇರೆ ಮಲ್ಟಿ ಕುಷನ್ ಹೋಟೆಲ್‌ಗಳಿಗೆ ಹೋಗಿ ಬಗೆ ಬಗೆ ತಿಂಡಿಗಳನ್ನು ರುಚಿ ನೋಡುತ್ತೇವೆ. ಇಲ್ಲಿ ಜಪಾನ್ ಮೂಲದವರ ಹೋಟೆಲ್‌ಗಳೂ, ಅಲ್ಲಿನ ಅಡುಗೆಗಳೂ ಲಭ್ಯವಿದೆ. ಹೀಗಾಗಿ ನಮಗೆ ಊಟ ತಿಂಡಿ ಸಮಸ್ಯೆ ಬರಲೇ ಇಲ್ಲ' ಎನ್ನುತ್ತಾರೆ ಅಕಿನೊರಿ ಅವರ ಪತ್ನಿ ನೊರಿಕೊ.

'ವಾರಾಂತ್ಯದಲ್ಲಿ ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ಗಳಲ್ಲಿ ನಡಿಗೆ, ವಾಯು ವಿಹಾರ ಮಾಡುತ್ತೇವೆ. ಲಾಲ್‌ಬಾಗ್ ತುಂಬ ಚೆನ್ನಾಗಿದೆ. ಯುಬಿ ಸಿಟಿ ಗೆ ಆಗಾಗ ಹೋಗುತ್ತಿರುತ್ತೇವೆ. ಯುಬಿ ಸಿಟಿಯನ್ನು ನೋಡಿದರೆ ನಮಗೆ ಜಪಾನ್‌ನಲ್ಲಿ ಇದ್ದ ಅನುಭವವಾಗುತ್ತದೆ ಎನ್ನುವ ನೊರಿಕೊ, ನನಗೆ ಕ್ರಿಕೆಟ್ ಆಡಲು ಇಷ್ಟ. ಆದರೆ ಈ ಆಟದ ನಿಯಮಾವಳಿಗಳು ಬಹಳ ಕಷ್ಟ ಅನಿಸ್ತದೆ' ಎನ್ನುತ್ತಾರೆ.

ಅಕಿನೊರಿಗೆ ಗಾಲ್ಫ್ ಆಟ ಬಹಳ ಇಷ್ಟವಂತೆ. ವಾರಾಂತ್ಯದಲ್ಲಿ ಕೆಲವೊಮ್ಮೆ ಗಾಲ್ಫ್ ಆಟದಲ್ಲಿ ತೊಡಗಿಸಿಕೊಳ್ಳುತ್ತಾರಂತೆ. ಇವರ ಮಗಳು ಕರಿನ್ ಟೋಕಿಯೊದಲ್ಲಿ ಓದುತ್ತಿದ್ದು, ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಾರಂತೆ.

★ ಅವನೀಶ್